ಶ್ರೀ ಸಿ. ಚೆನ್ನಿಗಪ್ಪ :- ಶ್ರೀ ಸಿದ್ದರಾಮಯ್ಯನವರ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ನೈತಿಕ ಹಕ್ಕಿಲ್ಲ. ನೀವೆಲ್ಲಾ ಬೇಕು ಎಂದು ಮಾತನಾಡುತ್ತಿದ್ದೀರಿ.

(ಗೊಂದಲ)

(ಈ ಹಂತದಲ್ಲಿ ಜಾತ್ಯಾತೀತ ಜನತಾದಳದ ಮಾನ್ಯ ಶ್ರೀ ಸಿ. ಚೆನ್ನಿಗಪ್ಪ ಹಾಗೂ ಮಾನ್ಯ ಚಲುವರಾಯಸ್ವಾಮಿಯವರು ಸದನದ ಬಾವಿಗೆ ಬಂದರು)

ಶ್ರೀ ಕರಿಯಣ್ಣ :- ಸಭಾಧ್ಯಕ್ಷರ ಬಗ್ಗೆ ಆ ತರಹ ಹೇಳಿಕೆ ಕೊಡುವುದಕ್ಕೆ ನಾಚಿಕೆಯಾಗಬೇಕು. ನಿಮ್ಮ ನಾಯಕರಿಗೆ ಹೋಗಿ ಹೇಳಿ.

ಉಪಾಧ್ಯಕ್ಷರು :- ಮಾನ್ಯ ಚನ್ನಿಗಪ್ಪನವರೆ, ನೀವು ನಿಮ್ಮ ಸ್ಥಳಗಳಿಗೆ ಹೋಗಿ ಕುಳಿತು ಕೊಂಡು ಮಾತನಾಡಿ. ಇಲ್ಲಿ ನಿಂತುಕೊಂಡು ಮಾತನಾಡಿದ್ದು ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ :- ಮಾನ್ಯ ಉಪಾಧ್ಯಕ್ಷರೆ, ನಾನು ನಿಮ್ಮನ್ನು ಮಾತನಾಡಲು ಅವಕಾಶಕೊಡಿ ಎಂದು ಕೇಳುತ್ತಿದ್ದೇನೆ. ನಾನು ಮಾನ್ಯ ಕರಿಯಣ್ಣನವರ ಜೊತೆಯಲ್ಲಿ ಸೂಚನೆ ಕೊಟ್ಟು ಮಾತನಾಡಬೇಕೆಂದು ಕೇಳಿರುವವರಲ್ಲಿ ನಾನು ಒಬ್ಬ ಸನ್ಮಾನ್ಯ ಉಪಾಧ್ಯಕ್ಷರೆ, ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ ಎನ್ನುವುದು ಪರಮೋಚ್ಚ ಸ್ಥಾನವಿದು. ಈ ಶಾಸಕಾಂಗದ ಪರಮೋಚ್ಚದ ಸ್ಥಾನದಲ್ಲಿ ಕುಳಿತುಕೊಂಡವರು ಈ ಸದನದ ಅಧ್ಯಕ್ಷರಾದ ಸಭಾಧ್ಯಕ್ಷರು. ತಾವು ಈಗ ಈ ಸದನದ ಅಧ್ಯಕ್ಷತೆಯನ್ನು ವಹಿಸಿರುತ್ತೀರಿ. ಇಲ್ಲಿ ಪ್ರಶ್ನೆ ಏನು ಎಂದರೆ, ಮಾನ್ಯ ಸಭಾಧ್ಯಕ್ಷರು ಕಾಂಗ್ರೆಸ್‌ಪಕ್ಷದ ಮುಖಂಡರು ಎಂದು ಹೇಳುವಂತಹ ಮಾತು ಬಂದಿದೆ. ಅವರು ಕಾಂಗ್ರೆಸ್‌ಪಕ್ಷದ ಮುಖಂಡರು ಅಲ್ಲವೇ ಅಲ್ಲ. ಅವರು ಸಭಾಧ್ಯಕ್ಷರಾಗಿ ಕುಳಿತ ದಿವಸದಿಂದ ಅವರು ಇಂಡಿಪೆಂಡೆಂಟ್ ಆಗಿ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಇದು ನನ್ನ ಒಂದನೆಯ ಪಾಯಿಂಟ್. ಎರಡನೆಯ ಪಾಯಿಂಟ್ ಏನೆಂದರೆ, ಅಲೆಗ್ಸಾಂಡರ್ ನೇತ್ರತ್ವದಲ್ಲಿ ನಾವು ಏನು ಸಮಿತಿಯನ್ನು ಮಾಡಿದ್ದೇವೆ, ಅದು ನಮ್ಮ ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರ. ಇದಕ್ಕೂ ಮಾನ್ಯ ಸಭಾಧ್ಯಕ್ಷರಿಗೂ ಏನು ಸಂಬಂಧವಿಲ್ಲ. ಸಭಾಧ್ಯಕ್ಷರು ಆ ಸಮಿತಿಯಲ್ಲಿ ನೇಮಕವಾಗಿ ಅವರು ಮೇಲಿನ ಕೇಂದ್ರ ಸರ್ಕಾರದಿಂದ ಬರತಕ್ಕಂಥ...

(ಗೊಂದಲ)

ಶ್ರೀ ಯು.ಆರ್. ಸಭಾಪತಿ :- ನಾನು ಮಾತನಾಡುತ್ತಿದ್ದೇನೆ. ಅವರು ಏಕೆ ಹೀಗೆ ಆಕ್ಷೇಪ ಮಾಡುತ್ತಿದ್ದಾರೆ ?

ಉಪಾಧ್ಯಕ್ಷರು :- ಆಯಿತು ಕುಳಿತುಕೊಳ್ಳಿ, ಸಭಾಪತಿಯವರೆ, ನೀವು ಮಾತನಾಡಿದ್ದು ಆಯಿತು ವಿಷಯ ಅರ್ಥವಾಯಿತಲ್ಲವೇ ?

ಶ್ರೀ ಯು.ಆರ್. ಸಭಾಪತಿ :- ನಾನು ಇನ್ನೂ ಮಾತನಾಡುತ್ತಿದ್ದೇನೆ. ಕ್ಷೇತ್ರ ವಿಂಗಡಣೆ ಬಗ್ಗೆ ಈ ಶಾಸನಸಭೆಯ ಪ್ರತಿಯೊಂದು ಸದಸ್ಯರ ಕ್ಷೇತ್ರ ವಿಂಗಡಣೆಯ ಜವಾಬ್ದಾರಿ ಮಾನ್ಯ ಸಭಾಧ್ಯಕ್ಷರದ್ದಾಗಿರುತ್ತದೆ. ಆ ಹಿನ್ನೆಲೆಯಲ್ಲಿ ಇವತ್ತು ಕರ್ನಾಟಕದಿಂದ ನಮ್ಮ ಸಭಾಧ್ಯಕ್ಷರೂ ಸಹ ಸದಸ್ಯರಾಗಿರುತ್ತಾರೆ, ಬೇರೆ ಯಾವ ವಿಷಯಕ್ಕೂ ಅಲ್ಲ. ಇದನ್ನು ಹಕ್ಕುಚ್ಯುತಿಗೆ ತರ ಬೇಕಾದಂಥ